ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

## ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

CC No. 1685/2022 CW-1 PW-1

| | | |
|---|---|---|
| ಹೆಸರು | : | ಸುನಿತಾ |
| ಗಂಡನ ಹೆಸರು | : | ಲಕ್ಷಣ್ ಕುಮಾರ್ ರೆಡ್ಡಿ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಮನೆಗೆಲಸ |
| ವಾಸಸ್ಥಳ | : | ಸಿಂಧನೂರು |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 14-02-2023

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ

ಚಾಸಾ-7 ನನ್ನ ಮಗ. ಚಾಸಾ-8 ರಿಂದ 10 ರವರ ಪರಿಚಯ ಇದೆ, ಅವರು ನಮ್ಮ ಪಕ್ಕದ ಮನೆಯವರು. ಆರೋಪಿತರನ್ನು ನೋಡಿರುತ್ತೇನೆ. ಅವರನ್ನು ಪೋಲೀಸರು ತೋರಿಸಿರುತ್ತಾರೆ.

ದಿಃ 17-12-2021 ರಂದು ರಾತ್ರಿ 10 ಗಂಟೆಗೆ ನಾನು ಹೈದ್ರಾಬಾದ್‌ನಿಂದ ಲೇಲಾಡಖ್‌ಗೆ ಪ್ರವಾಸಕ್ಕೆ ಹೋಗಿದ್ದೇನು. ನಮ್ಮ ಮನೆ ಬೀಗ ಹಾಕಿ ಚಾಸಾ-10 ರವರಿಗೆ ಗೆಸ್ಟ್‌ರೂಂ ನ ಬೀಗವನ್ನು ಗಿಡಗಳಿಗ ನೀರು ಹಾಕಲು ಹೇಳಿ ನೀಡಿ ಹೋಗಿದ್ದೇ.

ಲಾಡಖ್ ನಿಂದ ದಿಃ 29-12-2021 ರಂದು ನಾವು ಮರಳಿ ಸಿಂದನೂರಿಗೆ ಬೆಳಗಿನ ಜಾವ ಬಂದೆವು. ಆಗ ಚಾಸಾ 10 ರವರಿಗೆ ಫೋನ್ ಮಾಡಿ ಕರೆಸಿಕೊಂಡೆ, ನಾನು ಮತ್ತು ಚಾಸಾ 10 ರವರು ಸೇರಿ ಮನೆ ಒಳಗಡೆ ಹೋಗಲು ನಮ್ಮ ಮನೆಯ ಮಲಗುವ ಕೋಣೆಯ ಬಾಗಿಲು ತೆರೆದಿತ್ತು. ಹಿಂದಿನ ಮನೆ ಬಾಗಿಲು ಕಟ್ಟಾಗಿತ್ತು. ಮನೆಯ ಹಿಂದಿನ ಬಾಗಿಲನ ಚೀಲಕ ಮುರಿದಿತ್ತು ಮತ್ತು ಹಿಂದಿನ ಗ್ರಿಲ್ ತೆರೆದಿತ್ತು. ನಮ್ಮ ದೊಡ್ಡ ಮಲಗುವ ಕೋಣೆಯಲ್ಲಿ ಇಟ್ಟಿದ್ದ ಬೀರುವ ತೆರೆದಿತ್ತು. ಒಳಗಡೆ ಇಟ್ಟ ಲಾಕರ್ ಗಳನ್ನು ತೆಗೆದು ಅದರಲ್ಲಿ ಇಟ್ಟ ಬಂಗಾರದ ಡಬ್ಬಿಗಳನ್ನು ಮಂಚದ ಮೇಲೆ ಇಟ್ಟು ಬಂಗಾರವನ್ನು ದೋಚಿಕೊಂಡು ಹೋಗಿದ್ದರು. 24 ಬಗೆಯ ಆಭರಗಣಗಳು ಮತ್ತು ರೂ.50,000/- ನಗದು ಹಣ ಕಳ್ಳತನವಾಗಿತ್ತು. ಅನಂತರ ಮಃ 02 ಗಂಟೆ ಸುಮಾರಿಗೆ ಪೋಲಿಸಿರಿಗೆ ದೂರು ನೀಡಿದೆ. ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಾನು ದೂರು ನೀಡಿದ ನಂತರ ಪೋಲಿಸರು ಅದೇ ದಿನ ಸಂಜೆ 04-00 ಗಂಟೆಗೆ ನಮ್ಮ ಮನೆಗೆ ಬಂದು ಎಲ್ಲಾ ಪರಿಶೀಲಿಸಿ ಪಂಚನಾಮೆ ಜರುಗಿಸಿದರು. ಅದಕ್ಕೆ ನನ್ನ ಸಹಿ ಪಡೆದಿದ್ದಾರೆ. ಆಗ ಬಹಳ ಜನ ಇದ್ದರು, ಅವರ ಪೈಕಿ ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆ ಜರುಗಿಸಿದ್ದಾರೆ. ಸ್ಥಳವನ್ನು ನಾನೇ ತೋರಿಸಿದ್ದೇನೆ. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸ್ಥಳ ಪಂಚನಾಮೆಯನ್ನು ನಿಪಿ-2 ಎಂದು ಮತ್ತು ನಿಪಿ-2(ಎ) ಎಂದು ಗುರುತಿಸಲಾಯಿತು. ಪೋಲಿಸರು ಆಗ ಪೋಟೋ ತಗೆದುಕೊಂಡಿದ್ದಾರೆ . ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಭಾವಚಿತ್ರ ಗಳನ್ನು ನೋಡಿ ಗುರತಿಸಿದ್ದರಿಂದ ಅವುಗಳನ್ನು ನಿಪಿ-3 ರಿಂದ 8 ಎಂದು ಗುರುತಿಸಲಾಯಿತು.

ಪಂಚನಾಮೆ ಸಂದರ್ಭದಲ್ಲಿ ಒಂದು ಲಾಕ್ ಮತ್ತು ಒಂದು ಹಿಂದಿನ ಬಾಗಿಲಿನ ಕೊಂಡಿಯನ್ನು ಅಮಾನತ್ತು ಪಡೆಸಿಕೊಂಡಿದ್ದಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಅದೇ ರೀತಿ ಪೋಲೀಸರು ಶ್ವಾನದಳ ಮತ್ತು ಬೆರಳಚ್ಚು ತಜ್ಞರನ್ನು ಸಹ ಕರೆದುಕೊಂಡು ಬಂದಿದ್ದರು. ಬಂಗಾರ ಹಾಕಿದ ಖಾಲಿ ಡಬ್ಬಿಗಳನ್ನು ಪೋಲಿಸರು ಪಡೆದುಕೊಂಡಿಲ್ಲ, ಅವು ಮನೆಯಲ್ಲಿಯೇ ಇವೆ. ಸಾಕ್ಷಿಯು ಒಂದು ಕೀಲಿ ಪತ್ತಾ , ಎರಡು ಮುರಿದ ಚೀಲಕದ ದಂಡ ಮತ್ತು ಎರಡು ಚೀಲಕದ ಕೊಂಡಿಗಳನ್ನು ಮು.ಮಾ 1 ರಿಂದ 5 ಎಂದು ಗುರುತಿಸಲಾಯಿತು. ಆಗ ಪೋಲಿಸರು ನಮ್ಮನ್ನು ಘಟನೆ ಬಗ್ಗೆ ವಿಚಾರಿಸಿದ್ದಾರೆ.

ದಿಃ 17-01-2022 ರಂದು ನನ್ನನ್ನು ಪೋಲಿಸರು ಕಳ್ಳರು ಸಿಕ್ಕಿದ್ದಾರೆ ಎಂದು ಹೇಳಿ ಪೋಲಿಸ್ ಠಾಣೆಗೆ ಕರೆಸಿದ್ದರು. ಪೋ.ಠಾಣೆಯಲ್ಲಿ ಇದ್ದ ಒಬ್ಬ ಕಳ್ಳನನ್ನು ಪೋಲಿಸರು ನನಗೆ ತೋರಿಸಿದರು. ಅವರ ಹೆಸರು ಅನ್ವರ್ ಬಾಷ ಎಂದು ಗೊತ್ತಾಯಿತು. ಆಗ ನಾನು ಆರೋಪಿಯನ್ನು ವಿಚಾರಿಸಲಾಗಿ ತಾನು ಹಾಗೂ ಇನ್ನೊಬ್ಬ ಜೀಲಾನಿ ಬಾಷ ಸೇರಿ ನಮ್ಮ ಮನೆ ಕಳ್ಳತನ ಮಾಡಿ ಬಳ್ಳಾರಿಗೆ ಹೋಗಿದ್ದೇವು ಎಂದು ತಿಳಿಸಿದ.

ದಿಃ 19-01-2022 ರಂದು ಇನ್ನೊಬ್ಬ ಕಳ್ಳ ಸಿಕ್ಕಿದ್ದಾನೆ ಎಂದು ಹೇಳಿದ್ದರಿಂದ ನಾನು ಪೋ.ಠಾಣೆಗೆ ಹೋಗಿದ್ದೇ, ಅಲ್ಲಿ ಪೋ.ಠಾಣೆಯಲ್ಲಿ ಇನ್ನೊಬ್ಬ ಜೀಲಾನಿ ಬಾಷ ಇದ್ದ. ಆತನು ಸಹ ನಾವು ಇಬ್ಬರು ಸೇರಿ ಕಳ್ಳತನ ಮಾಡಿದ್ದೇವೆ ಎಂದು ಒಪ್ಪಿಕೊಂಡನು. ಪೋಲಿಸರು ಅಲ್ಲಿ ನನ್ನನ್ನು ಏನು ವಿಚಾರಿಸಿಲ್ಲ. ವಿಚಾರಿಸಿದ ಬಗ್ಗೆ ನನಗೆ ನೆನಪು ಬರುತ್ತಿಲ್ಲ. ಪೋಲಿಸ್ ಠಾಣೆಯಲ್ಲಿ ನನ್ನ ಕಳ್ಳತನವಾದ ಬಂಗಾರದ ಆಭರಣಗಳನ್ನು ತೋರಿಸಿದರು .ಅವುಗಳನ್ನು ನೋಡಿ ಗುರುತಿಸಿದೆ. ಕೆಲವು ಮಾತ್ರ ಇದ್ದವು ಪೋಲಿಸ್ ಠಾಣೆಯಲ್ಲಿ ಇದ್ದ ಎರಡು ಜನ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

-

ನ್ಯಾಯಾಲಯದ ಮುಂದೆ ಇರುವ 3 ನೇ ಆರೋಪಿ ಇತನೇ ಇರಬಹುದು ಇತನನ್ನು ಠಾಣೆಯಲ್ಲಿ ನಾನು ನೋಡಿರುವುದಿಲ್ಲ, ಠಾಣೆಯಲ್ಲಿ ನೋಡಿದ ಇಬ್ಬರು ಆರೋಪಿತರು ಬೇರೆ ಇದ್ದಾರೆ. (1 ಮತ್ತು 2 ನೇ ಆರೋಪಿತರು ಗೈರು ಹಾಜರಿದ್ದು, ಅವರ ಗುರುತಿಸುವಿಕೆಯ ಬಗ್ಗೆ ಆರೋಪಿಯ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿರುತ್ತಾರೆ.) ನನ್ನ ಕೆಲವು ಸಿಕ್ಕ ಆಭರಣಗಳನ್ನು ನ್ಯಾಯಾಲಯದಿಂದ ಬಿಡಿಸಿಕೊಂಡಿದ್ದೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಕಡತದಲ್ಲಿರುವ ಅಭರಣಗಳ ಭಾವಚಿತ್ರ ಗಳನ್ನು ನೋಡಿ ಗುರುತಿಸಿದ್ದರಿಂದ, ಅವುಗಳನ್ನು ನಿಪಿ-9 ರಿಂದ 14 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ **1** ಮತ್ತು **2** ನೇ ಆರೋಪಿ ಪರ ವಕೀಲರಿಂದ</u>

ನನಗೆ ಕನ್ನಡ ಬರೆಯಲು ಬರುವುದಿಲ್ಲ, ಓದಲು ಬರುತ್ತದೆ. ಪೋಲಿಸರು ದೂರನ್ನು ನಾನು ಹೇಳಿದಂತೆ ತಯಾರಿಸಿದ್ದಾರೆ. ಆಭರಣಗಳ ರಸೀದಿಗಳನ್ನು ಪೋಲಿಸರಿಗೆ ನೀಡಿದ್ದೇ. ಎಷ್ಟು ರಸೀದಿಗಳನ್ನು ಪೋಲಿಸರಿಗೆ ನೀಡಿದ್ದೇ ನನಗೆ ನೆನಪಿಲ್ಲ. ಆ ಬಿಲ್‌ಗಳನ್ನು ಯಾವ ಅಂಗಡಿಯಿಂದ ಪಡೆದುಕೊಂಡಿದ್ದೆ ಎಂದರೆ ಕೆಲವು ಅಭರಣಗಳು ನನ್ನ ಮದುವೆ ಪೂರ್ವದಲ್ಲಿ ನನ್ನ ತವರು ಮನೆಯವರು ಮಾಡಿಸಿದ್ದರಿಂದ ಮತ್ತು ಕೆಲವು ನನ್ನ ಮದುವೆ ನಂತರ ಮಾಡಿಸಿದ್ದರಿಂದ ಹೇಳಲಾಗುವುದಿಲ್ಲ.

ನಾನು ಲಾಡಖ್‌ಗೆ ಪ್ರವಾಸಕ್ಕೆ ಹೋಗಿ ಬಂದ ಬಗ್ಗೆ ಪ್ರಯಾಣದ ಟಿಕೆಟ್‌ನ್ನು ಪೋಲಿಸರಿಗೆ ನೀಡಿದ್ದೇ. ದೂರಿನಲ್ಲಿ ಆಭರಗಣಗಳ ರಸೀದಿಗಳನ್ನು ನೀಡಿದ ಬಗ್ಗೆ ಬರೆದಿದೆ. ದೂರಿನಲ್ಲಿ ಆಭರಗಣಗಳ ರಸೀದಿಗಳು ಮತ್ತು ಪ್ರಯಾಣದ ಟಿಕೆಟ್‌ಗಳ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನನ್ನ ದೂರಿನೊಂದಿಗೆ ನಾನು ನೀಡಿದ ರಸೀದಿಗಳನ್ನು ಮತ್ತು ಟಿಕೆಟ್‌ಗಳನ್ನು ಲಗತ್ತಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮನೆಗೆ ನಂಬರ್ ಇರುವುದಿಲ್ಲ, ಆದರೆ ಸ್ಪರ್ಶ್ ಆಸ್ಪತ್ರೆಯ ಪಕ್ಕದಲ್ಲಿ ಇದೆ. ಆ ಮನೆ ಮಾಲೀಕಳು ನಾನೇ ಇರುತ್ತೇನೆ. ಪ್ರತಿಯೊಂದು ಅಭರಣವು ಎಷ್ಟು ತೂಕ ಇತ್ತು ಎಂದು ಅಂದಾಜಿನಲ್ಲಿ ಹೇಳಬಲ್ಲೇ. ದೂರಿನಲ್ಲಿ ನಾನು 24 ನಮೂನೆಯ ಆಭರಣಗಳು ಕಳ್ಳತನ ಆಗಿವೆ ಎಂದು ನಮೂದಿಸಿದ್ದೇನೆ.

ಊರಿಂದ ಬಂದ ನಂತರ ಮೊದಲು ನಮ್ಮ ಮನೆಯಲ್ಲಿ ನಾನೇ ಪ್ರವೇಶಿಸಿದ್ದೇ. ನಮ್ಮ ಮನೆಗೆ ಮುಂದೆ ಒಂದು ಮುಖ್ಯ ದ್ವಾರ ಮತ್ತು ಹಿಂದೆ ಒಂದು ಬಾಗಿಲು ಇದೆ. ಆಗ ನಮ್ಮ ಮನೆಗೆ ಸಿಸಿ ಕ್ಯಾಮೆರಾ ಅಳವಡಿಸಿರಲಿಲ್ಲ ನಂತರ ಅಳವಡಿಸಿದ್ದೇನೆ.

ಪೋಲಿಸರು ಪಂಚನಾಮೆ ನಕ್ಷೆ ತಯಾರಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಪೋಲಿಸರು ತಯಾರು ಮಾಡಿದ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ಅದನ್ನು ಓದಿ ಸಹಿ ಮಾಡಿದ ಬಗ್ಗೆ ನನಗೆ ನೆನಪಿಲ್ಲ.

ಮು.ಮಾ.1 ರಿಂದ 5 ರಂತಹ ವಸ್ತುಗಳನು ಸಾಮಾನ್ಯವಾಗಿ ಹಾರ್ಡ್‌ವೇರ್ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಕೀಲಿ ಪತ್ತಕ್ಕೆ ಹೊಡೆದು ತೆಗೆದ ಬಗ್ಗೆ ಗುರುತು ಇಲ್ಲ ಎಂದರೆ ನನಗೆ ಗೊತ್ತಾಗುವುದಿಲ್ಲ. ಉಳಿದ ಮು. ಮಾ. ಸ್ಕ್ರೂ ತೆಗೆದ ಹಾಗೆ ಇದೆ ಮುರಿದ ಹಾಗೆ ಇದೆ ಎಂದರೆ ಸಾಕ್ಷಿ ಯು ಅವು ಬಾಗಿಲಿಗೆ ನೇತಾಡುತ್ತಿದ್ದವು ಬೀಗ ಮಾತ್ರ ಕೆಳಗೆ ಬಿದ್ದಿತ್ತು ಎಂದು ನುಡಿಯುತ್ತಾರೆ. ಇನ್ನೊಂದು ಬಾಗಿಲಿನ ಮುರಿದ ದಂಡ ಒಳಗಡೆ ಬಾಗಿಲಿಗೆ ಇದೆ ಎಂದರೆ ಸರಿ. ಬಾಗಿಲಿಗೆ ನೇತಾಡುತ್ತಿದ್ದ ಕೊಂಡಿಗಳನ್ನು ಯಾರು ಬಿಚ್ಚಿದರು ಎಂದು ನಾನು ನಮ್ಮ ಮನೆ ಕಳ್ಳತನವಾದ ವಿಷಯದಲ್ಲಿ ದುಖದಲ್ಲಿ ಇದ್ದ ಕಾರಣ ಗೊತ್ತಾಗಲಿಲ್ಲ.

ದೂರು ನೀಡಿದ ನಂತರ 2 ಬಾರಿ ಪೋಲಿಸ್ ಠಾಣೆಗೆ ಹೋಗಿದ್ದೇ ನಂತರ ಆಭರಣ ಬಿಡಿಸಿಕೊಳ್ಳಲು ಹೋಗಿದ್ದೇ. ನಾನು ಪೋಲಿಸ್ ಠಾಣೆಗೆ ಹೋದಾಗ ನನ್ನನ್ನು ವಿಚಾರಿಸಿದ್ದಾರೆ.

ನಮ್ಮ ಮನೆಯಲ್ಲಿ ಆಗ ನಾನು ಹಾಗೂ ನನ್ನ ತಾಯಿ ಇರುತ್ತಿದ್ದೇವು, ಅವಳು ನನಗಿಂತ ಮುಂಚೆ ಹೈದ್ರಾಬಾದ್‌ಗೆ ಹೋಗಿದ್ದರು. ನಾನು ಲಡಾಖ್ ನಲ್ಲಿ ಇದ್ದಿದ್ದರಿಂದ ಅಲ್ಲಿ ಸಿಗ್ನಲ್ ಸರಿಯಾಗಿ ಬರದ ಕಾರಣ ಚಾಸಾ-10 ರವರೊಂದಿಗೆ ಪ್ರತಿ ದಿನ ನಮ್ಮ ಮನೆ ಬಗ್ಗೆ ವಿಚಾರಿಸುತ್ತಿರಲಿಲ್ಲ.

ಅಲಮಾರದ ಮುರಿದ ಭಾಗಗಳನ್ನು ಪೋಲಿಸರು ಅಮಾನತ್ತು ಪಡೆಸಿಕೊಂಡಿಲ್ಲ. ನಾನು ಬ್ಯಾಂಕ್‌ನಲ್ಲಿ ಲಾಕರ್ ಹೊಂದಿದ್ದೇನೆ, ಆದರೆ ಆಗ ಬ್ಯಾಂಕ್ ರಜೆ ಇದ್ದ ಕಾರಣ ಅಭರಗಣಗಳನ್ನು ಮನೆಯಲ್ಲಿ ಇಟ್ಟಿದ್ದೇ. ನಾನು ಪ್ರವಾಸಕ್ಕೆ ಹೋಗುವ ಪೂರ್ವದಲ್ಲಿ ಬ್ಯಾಂಕ್ ಲಾಕರ್ ನಿಂದ ಅಭರಣಗಳನ್ನು ತೆಗೆದುಕೊಂಡು ಬಂದಿದ್ದೆ. ಬ್ಯಾಂಕ್ ಲಾಕರ್ ನಿಂದ ಅಭರಣಗಳನ್ನು ತೆಗೆದುಕೊಳ್ಳಬೇಕಾದರೆ ರಸೀದಿ ನೀಡುತ್ತಾರೆ ಎಂರದೆ ಸರಿ ಅಲ್ಲ.

ನಾನು ದೂರು ನೀಡಿದ 2 ತಾಸಿನ ನಂತರ ಪೋಲಿಸರು ಮನೆಗೆ ಬಂದಿದ್ದರು. (ಈ ಸಂದರ್ಭದಲ್ಲಿ ಸಾಕ್ಷಿಯು ಅಳುತ್ತಾ ಕಣ್ಣೀರು ಹಾಕುತ್ತಾ ಕಣ್ಣೀರು ಒರೆಸಿಕೊಳ್ಳುತ್ತಿದ್ದಾರೆ.) ಪೋಲಿಸರು ಸ್ಥಳಕ್ಕೆ ಬಂದಾಗ ಬಹಳ ಜನ ಸೇರಿದ್ದರು. ಪಂಚನಾಮೆಯನ್ನು ಪೋಲಿಸರು ಬರೆದಿದ್ದಾರೆ. ಸಿಪಿಐ ಮತ್ತು ಪಿ.ಎಸ್.ಐ ರವರು ಸೇರಿ ಆರೋಪಿತರನ್ನು ತೋರಿಸಿದ್ದಾರೆ. ಗ್ರಿಲ್‌ಗೆ ಸಂಬಂಧಿಸಿದ ಬೀಗವನ್ನು ಪೋಲಿಸರು ಅಮಾನತ್ತು ಪಡೆಸಿಕೊಂಡಿದ್ದಾರೆ. ನಾನು ಪ್ರವಾಸಕ್ಕೆ ಹೋಗುವ ದಿನದಂದು ಕೈಗಡ ಸಾಲ ನೀಡಿದ ಶೇಖರಸ್ವಾಮಿರವರು ರೂ.50,000/- ನಗದು ಹಣವನ್ನು ಮರಳಿ ಕೊಟ್ಟಿದ್ದರು.

ಠಾಣೆಯಲ್ಲಿ ನೋಡಿದ 2 ಜನ ಆರೋಪಿತರನ್ನು ವೈಯಕ್ತಿಕವಾಗಿ ನೋಡಿ ಗುರುತಿಸಲಾಗುವುದಿಲ್ಲ ಎಂದರೆ ಸರಿ ಅಲ್ಲ. ಪೋಲಿಸರು ನಮ್ಮ ಮನೆಯಲ್ಲಿ ಸುಮಾರು 3 ಬಾರಿ ಪಂಚನಾಮೆ ಮಾಡಿದ್ದಾರೆ. ಅವುಗಳಿಗೆ ನಾನು ಸಹಿ ಮಾಡಿದ್ದೇನೆ.

ನಾನು ಆಭರಣಗಳನ್ನು ಬಿಡಿಸಿಕೊಳ್ಳುವಾಗ ಪೋಲಿಸರು ಆಭರಣಗಳ ಪೋಟೋ ತೆಗೆದಿದ್ದಾರೆ. ನಮ್ಮ ಮನೆಯಲ್ಲಿ ಯಾವುದೇ ರೀತಿ ಕಳ್ಳತನವಾಗಿಲ್ಲ ಪೋಲಿಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ನಮ್ಮ ಮನೆಯಲ್ಲಿ ಕಳ್ಳತನ ಮಾಡಿಲ್ಲ, ಪೋಲಿಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಪಪ.

<u>ಪಾಟೀ ಸವಾಲುಃ **3** ನೇ ಆರೋಪಿ ಪರ ವಕೀಲರಿಂದ</u>

1 ಮತ್ತು 2 ನೇ ಆರೋಪಿ ಪರ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.